534 (172) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 2006–07 ಮತ್ತು 2007–08ನೇ ಸಾಲಿನಲ್ಲಿ ರಾಜ್ಯದಲ್ಲಿ ಎಷ್ಟು ನೂತನ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾಯಿತು (ಪ್ರತಿ ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

2) ನೂತನ ಪ್ರೌಢಶಾಲಾ ಮಂಜೂರಾತಿಗೆ ಸರ್ಕಾರವು ಅನುಸರಿಸಿದ ಮಾನದಂಡವೇನು?

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

1) 2006–07 – 485

2007–08 – 199

ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

2) * ಸ್ಥಳೀಯ ಅಗತ್ಯತೆ ಹಾಗೂ ಆಯವ್ಯಯದ ಲಭ್ಯತೆಗನುಸಾರ.

* ಡಾ॥ ನಂಜುಂಡಪ್ಪ ವರದಿಯಂತೆ ಅತಿ ಹಿಂದುಳಿದ, ಹಿಂದುಳಿದ ತಾಲ್ಲೂಕುಗಳಿಗೆ ಆದ್ಯತೆ.

* ಜನರ ಪ್ರತಿನಿಧಿಗಳ ಶಾಸಕರುಗಳ ಮನವಿ.

* 5 ಕಿ.ಮೀ ಅಂತರದಲ್ಲಿ ಸರ್ಕಾರಿ ಅಥವಾ ಖಾಸಗಿ ಪ್ರೌಢಶಾಲೆಗಳು ಇಲ್ಲದೇ ಇರುವ ಸ್ಥಳ (ನಗರ ಪ್ರದೇಶಗಳನ್ನು ಹೊರತುಪಡಿಸಿ).

* ಕನಿಷ್ಠ 50 ಮಕ್ಕಳ ದಾಖಲಾಗುವಂತಿರಬೇಕು.

* 2 ರಿಂದ 5 ಎಕರೆ ನಿವೇಶನ ದೊರಕುವಂತಿರಬೇಕು (ನಗರ ಪ್ರದೇಶಗಳನ್ನು ಹೊರತುಪಡಿಸಿ).

537 (1177) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ತಾಲ್ಲೂಕು ಬಜಾಲು ಗ್ರಾಮದಲ್ಲಿ 1996–97 ನೇ ಸಾಲಿನಲ್ಲಿ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಸಾವಿರಾರು ಜನರು ಸೌಲಭ್ಯವನ್ನು ಪಡೆದುಕೊಂಡಿದ್ದು, ಸರ್ಕಾರ ತನ್ನ ಪಾಲಿನ ಸಬ್ಸಿಡಿಯನ್ನು ಪಾವತಿಸಿರುವುದು ನಿಜವಲ್ಲವೇ; ಈ ಯೋಜನೆಯಡಿಯಲ್ಲಿ ಹಣ ಮರುಪಾವತಿಗೆ ವಿಧಿಸಲಾಗಿದ್ದ ನಿಯಮಗಳೇನು;

ಆ) ಈ ಗ್ರಾಮವು 2002–2003ನೇ ಸಾಲಿನಲ್ಲಿ ಮಂಗಳೂರು ಮಹಾನಗರ ಪಾಲಿಕೆಯಲ್ಲಿ ವೀಲಿನಗೊಂಡಿದ್ದು ದೀರ್ಘ ಕಾಲದ ನಂತರ 2006ನೇ ಸಾಲಿನಲ್ಲಿ ಬಡ್ಡಿ ಹಣವನ್ನು ಕಟ್ಟಲು ಪಾಲಿಕೆಯವರು ಆದೇಶ ನೀಡಿರುವುದು ಫಲಾನುಭವಿಗಳ ಆತಂಕಕ್ಕೆ ಕಾರಣವಾಗಿದ್ದು, ಅವರಿಗೆ ಬಡ್ಡಿ ಹಣವನ್ನು ಮನ್ನಾ ಮಾಡಲು ಸರ್ಕಾರ ಮುಂದಾಗುವುದೇ?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) ಹೌದು. ಈ ಯೋಜನೆಯಡಿಯಲ್ಲಿ ರೂ.20000/– ಘಟಕ ವೆಚ್ಚವಿದ್ದು, ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಂಪೂರ್ಣ ಸಹಾಯಧನವಾಗಿದ್ದು, ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಮಾತ್ರ ಶೇಕಡ 50ರಷ್ಟು ಸಾಲ ಮತ್ತು ಶೇಕಡ 50 ರಷ್ಟು ಸಹಾಯಧನವಾಗಿರುತ್ತದೆ.

ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಮನೆ ಆಯ್ಕೆಯಾದ ನಂತರ ನಿಯಮಾನುಸಾರ ದಾಖಲೀಕರಣ ಮಾಡಲಾಗುತ್ತದೆ.

ಸಾಮಾನ್ಯ ವರ್ಗದ ಫಲಾನುಭವಿಗಳು ಪಡೆದ ಸಾಲವನ್ನು ಪ್ರತಿ ತಿಂಗಳು ರೂ.115/– ರಂತೆ (ಅಥವಾ ದಿನಕ್ಕೆ ರೂ.5/– ರಿಂದ 10/– 180 ಸುಲಭ ಕಂತುಗಳಲ್ಲಿ 15 ವರ್ಷಗಳವರೆಗೆ ಮರುಪಾವತಿಸಬಹುದಾಗಿದೆ.

ಆ) ಇಲ್ಲ.

539 (1183) ಶ್ರೀ ಕೃಷ್ಣ ಬೈರೇಗೌಡ ಸಿ.ಟಿ (ವೇಮಗಲ್) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಜಿನಿಯರಿಂಗ್, ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿ.ಇ.ಟಿ) ಯನ್ನು ಏಕಮಾತ್ರ ಮಾನದಂಡವಾಗಿ ಪರಿಗಣಿಸಿದ ನಂತರ ರಾಜ್ಯದ ವಿದ್ಯಾರ್ಥಿಗಳಿಗೆ ಇದರಿಂದ ಆಗಿರತಕ್ಕಂಥ ಅನಾನುಕೂಲ ಹಾಗೂ ಅನುಕೂಲಗಳೇನು;